ವಿಚಾರಪ್ರಭ

# ಪರಮಾರ್ಥ ಸಾಧನೆ

ಸ್ವಾಮೀ ಪರಮಾನಂದ ಭಾರತೀ

### ಕೆಲವು ಪದಗಳ ಅರ್ಥ

ಈ ಲೇಖನದಲ್ಲಿ ಉಪಯೋಗಿಸಿರುವ ಕೆಲವು ಪದಗಳ ಅರ್ಥ ಇದು:

ಮಡಕೆ, ಹೆಂಚು ಇತ್ಯಾದಿ **ಕಾರ್ಯ**ಗಳು; ಮಣ್ಣು ಅವುಗಳ **ಉಪಾದಾನ ಕಾರಣ**, ಕುಂಬಾರನು **ನಿಮಿತ್ತ ಕಾರಣ**. ಹೀಗೆಯೇ ಬಂಗಾರವು ಒಡವೆಗಳ ಉಪಾದಾನ ಕಾರಣ ಮತ್ತು ಅಕ್ಕಸಾಲಿಯು ನಿಮಿತ್ತ ಕಾರಣ.

**ಸತ್ಯ** ಎಂದರೆ ಬದಲಾಯಿಸದಿರುವುದು. **ಅಸತ್ಯ** ಎಂದರೆ ಬದಲಾಯಿಸುವುದು. **ಸ್ವರೂಪ** ಎಂದರೆ ಸತ್ಯವಾದ ರೂಪ– ಬದಲಾಯಿಸದ ರೂಪ.

ಮಡಕೆ, ಹೆಂಚು **ಅಸತ್ಯ**, ಮಣ್ಣು **ಸತ್ಯ**. ಒಡವೆಗಳು **ಅಸತ್ಯ**, ಬಂಗಾರವು **ಸತ್ಯ**. ಆದ್ದರಿಂದ ಮಣ್ಣೇ ಮಡಕೆ, ಹೆಂಚುಗಳ ಸ್ವರೂಪ, ಬಂಗಾರವು ಒಡವೆಗಳ ಸ್ವರೂಪ.

### ಜಗತ್ತು

ಜಗತ್ತು ಬದಲಾಯಿಸುತ್ತಿರುವುದು ಸರ್ವವಿದಿತ, ಎಂದರೆ ಅದು ಅಸತ್ಯ. ಇದರ ಸ್ವರೂಪವೇನು ಎಂದರೆ ಇದರ ಉಪಾದಾನ ಕಾರಣವು ಏನು? ಎಂಬುದು ಪ್ರಶ್ನೆ. ಇದಕ್ಕೆ ಬೇರೆ ಬೇರೆ ಸಿದ್ಧಾಂತಗಳು ಬೇರೆ ಬೇರೆ ಉತ್ತರಗಳನ್ನು ಹೇಳುತ್ತವೆ. ಇವೆಲ್ಲವೂ ಅನುಮಾನ ಪ್ರಮಾಣದ ಆಧಾರದ ಮೇಲೆ ನಿಂತಿವೆ. ಎಂದರೆ, ಊಹೆಯ ಮೇಲೆ ನಿಂತಿವೆ. ಉದಾಹರಣೆಗೆ ವೈಶೇಷಿಕರು ಅಣುಗಳನ್ನು ಜಗತ್ತಿನ ಉಪಾದಾನವೆಂದು ಊಹಿಸುತ್ತಾರೆ. ಆದರೆ ಅವರ ಊಹೆಯನ್ನು ಅನುಸರಿಸಿಯೇ ಅಣುಗಳು ಅಸತ್ಯ ಎಂಬುದನ್ನು ಸಿದ್ಧಪಡಿಸಬಹುದು. ಆದ್ದರಿಂದ ಅವು ಕಾರಣವಾಗಲಾರವು. ಬಹಳ ಮಟ್ಟಿಗೆ ಇದೇ ಪ್ರಕಾರವಾಗಿ ಆಧುನಿಕ ವಿಜ್ಞಾನವೂ ಜಗತ್ತಿನ ಉಪಾದಾನವನ್ನು ಅಣು ಗಳೆಂದು ಪ್ರತಿಪಾದಿಸಿತು. ಆದರೆ ಅವು ಬದಲಾಯಿಸುವುವೆಂದೂ, ಆದ್ದರಿಂದ ಕಾರಣವಾಗಲಾರದೆಂದೂ ಕಾಲಕ್ರಮದಲ್ಲಿ ಮನದಟ್ಟಾ ಯಿತು. ಆಗ ಅಣುಗಳಿಗೂ ಕಾರಣವಾಗಿ ಆ–ಈ ಶಕ್ತಿವಿಶೇಷಗಳನ್ನು ಅನುಮಾನಿಸಲಾಯಿತು. ಆದರೆ ಈ ಶಕ್ತಿಗಳೂ ಸತ್ಯವಲ್ಲದ್ದರಿಂದ ಜಗತ್ತಿನ ಮೂಲಕಾರಣವಾಗಲಾರವು.

ಹೀಗೆ ಅನುಮಾನ ಪ್ರಮಾಣವನ್ನು ಆಧರಿಸಿ ಹೇಳುವ ಯಾವುದೇ ಉತ್ತರವೂ ಸರಿಯಾಗುವುದಿಲ್ಲ. ಈಗೀಗ ಈ ವಿಷಯವು ವಿಜ್ಞಾನಿ ಗಳಿಗೂ ಮನದಟ್ಟಾಗುತ್ತಿದೆ.

ಆದರೆ ಶ್ರುತಿ ಪ್ರಮಾಣವು, ಎಂದರೆ ಅಪೌರುಷೇಯವಾದ ವೇದವು ಪರಮಾತ್ಮನನ್ನು ಜಗತ್ತಿನ ಉಪಾದಾನವೆಂದು ಹೇಳುತ್ತದೆ. ಆದ್ದರಿಂದ ಅವನು ಸತ್ಯ. ಎಂದರೆ ಜಗತ್ತಿನ ಆಕಾರದಲ್ಲಿ ತೋರುತ್ತಿದ್ದರೂ, ಅವನು ಈಗಲೂ ಮುಂಚಿನಂತೆಯೇ ಇದ್ದಾನೆ, ಬದಲಾಯಿಸಿಲ್ಲ. ಉದಾಹರಣೆಗೆ ಜಲಜನಕ–ಆಮ್ಲಜನಕಗಳು ($H_2O$) ಮಂಜಿ ನಂತೆಯೂ, ಅದು ಕರಗಿ ನೀರಿನಂತೆಯೂ, ಮುಂದೆ ಇನ್ನೂ ಪರಿಣಮಿಸಿ ಆವಿಯಂತೆಯೂ ತೋರುತ್ತಿದ್ದರೂ – ಈ ಮೂರರಲ್ಲೂ, ತನ್ನ ಸ್ವರೂಪವನ್ನು ಕೆಡಿಸಿಕೊಳ್ಳದೆ $H_2O$ ಮಾತ್ರವೇ ಇದೆ. ಹಾಗೆಯೇ ಪರಮಾತ್ಮನು ಜಗದ್ರೂಪದಲ್ಲಿ ತೋರುತ್ತಿದ್ದರೂ ತನ್ನ ಸ್ವರೂಪದಿಂದ ಚ್ಯುತನಾಗಿಲ್ಲ.

ಇನ್ನು ಈ ಜಗತ್ತಿನ ನಿಮಿತ್ತ ಕಾರಣವೂ ಅವನೇ ಎನ್ನುತ್ತದೆ ಶ್ರುತಿ.

**ಪ್ರಶ್ನೆ:** ನಮ್ಮ ಅನುಭವದಲ್ಲಿ ನಿಮಿತ್ತ ಮತ್ತು ಉಪಾದಾನ ಕಾರಣಗಳು ಬೇರೆಬೇರೆಯೇ ಇವೆ. ಕುಂಬಾರ–ಮಣ್ಣು, ಅಕ್ಕಸಾಲಿ–ಬಂಗಾರ ಇವು ಬೇರೆ ಬೇರೆಯಷ್ಟೆ. ಜಗದ್ವಿಷಯದಲ್ಲಿ ಒಬ್ಬ ಪರಮಾತ್ಮನೇ ಎರಡೂ ಹೇಗಾಗಲು ಸಾಧ್ಯ?

**ಉತ್ತರ:** ಎರಡೂ ಬೇರೆ ಬೇರೆಯೇ ಆಗಿರಬೇಕೆಂಬ ನಿಯಮವೇನಿಲ್ಲ. ಉದಾಹರಣೆಗೆ ಜೇಡರ ಬಲೆಗೆ ಜೇಡನೇ ನಿಮಿತ್ತ ಉಪಾದಾನ – ಎರಡೂ ಆಗಿದೆ. ಆದ್ದರಿಂದ ಜಗದ್ವಿಷಯದಲ್ಲೂ ಎರಡು ಕಾರಣಗಳೂ ಒಬ್ಬನೇ ಎನ್ನುವ ಶ್ರುತಿವಾಕ್ಯದಲ್ಲಿ ದೋಷವಿರಲು ಸಾಧ್ಯವಿಲ್ಲ.

**ಪುನಃ ಪ್ರಶ್ನೆ:** ಬಲೆಗೆ ಜೇಡದ ಚೈತನ್ಯವು ನಿಮಿತ್ತವೂ, ಅದರ ಜಡ ಶರೀರವು ಉಪಾದಾನವೂ ಆಗಿವೆ. ಆದರೆ ಪರಮಾತ್ಮನು ಚೇತನ ಮಾತ್ರವೇ ಆಗಿದ್ದಾನೆ. ಅವನಿಗೆ ಶರೀರವಿಲ್ಲ. ಹೀಗಿರುವಾಗ ಚೇತನ ನಾದ ಪರಮಾತ್ಮನಿಂದ ತದ್ವಿರುದ್ಧ ಜಡ ಜಗತ್ತು ಹೇಗುಂಟಾದೀತು?

**ಉತ್ತರ:** ಕಾರಣ ಸ್ವರೂಪಕ್ಕೆ ವಿರುದ್ಧವಾದ ಕಾರ್ಯವುಂಟಾಗಲಾರ ದೆಂಬ ನಿಯಮವೇನೂ ಇಲ್ಲ. ಉದಾಹರಣೆಗೆ ಉರಿಯುವ ಮತ್ತು ಉರಿಯನ್ನು ಉತ್ತೇಜಿಸುವ ಸ್ವಭಾವಗಳುಳ್ಳ ಜಲಜನಕ ಆಮ್ಲಜನಕಗಳು ತದ್ವಿರುದ್ಧವಾಗಿ ಉರಿಯನ್ನು ಆರಿಸುವ ಸ್ವಭಾವದ ನೀರಿಗೆ ಕಾರಣ ವಾಗಿವೆಯಷ್ಟೆ ಹಾಗೆಯೇ ಚೈತನ್ಯ ಸ್ವಭಾವದ ಪರಮಾತ್ಮನಿಂದ ತದ್ವಿರುದ್ಧ ವಾದ ಜಡ ಜಗತ್ತು ಬಂದಿದೆಯೆಂಬ ಶ್ರುತಿವಾಕ್ಯದಲ್ಲಿ ದೋಷವಿರಲು ಸಾಧ್ಯವಿಲ್ಲ.

### ಪರಮಾತ್ಮ

ಇನ್ನು ಪರಮಾತ್ಮನು ಜಗತ್ತಿನ ಉಪಾದಾನ ಮತ್ತು ನಿಮಿತ್ತ ಎಂಬ ಹೇತುಗಳಿಂದ ಅವನ ಲಕ್ಷಣಗಳನ್ನು ಅರಿತುಕೊಳ್ಳಬಹುದು.

೧) ಒಡವೆಗಳು ಅಸತ್ಯವಾದರೂ ಅವುಗಳ ಉಪಾದಾನವು ಸತ್ಯವಾಗಿರುವಂತೆ ಜಗತ್ತು ಅಸತ್ಯವಾದರೂ ಅವನು ಸತ್ಯ.

೨) ಒಡವೆಗಳಲ್ಲೆಲ್ಲಾ ಚಿನ್ನವೇ ವ್ಯಾಪಿಸಿರುವಂತೆ ಪೃಥಿವ್ಯಪ್ತೇಜೋ –ವಾಯ್ವಾಕಾಶಗಳಲ್ಲೆಲ್ಲಾ* ಪರಮಾತ್ಮನೇ ವ್ಯಾಪಿಸಿದ್ದಾನೆ. ಆದ್ದರಿಂದ ಅವನು ಅನಂತ.

* *ಭೂಮಿ, ನೀರು, ಅಗ್ನಿ, ಗಾಳಿ, ಆಕಾಶಗಳೆಂಬ ಪಂಚಭೂತಗಳು*

೩) ಜಗತ್ತಿಗೆ ನಿಮಿತ್ತನಾದ ಪರಮಾತ್ಮನು ಚೇತನನೇ ಆಗಿರಬೇಕು. ಏಕೆಂದರೆ ಜಡತತ್ತ್ವಗಳಲ್ಲಿ ಯಾವುದೇ ಕಾರ್ಯಮಾಡಲು ಪ್ರವೃತ್ತಿ ಉಂಟಾಗುವುದು ಸಾಧ್ಯವಿಲ್ಲ: ಪ್ರವೃತ್ತಿ ಚೇತನದಲ್ಲಿ ಮಾತ್ರವೇ ಕಾಣಿಸುತ್ತದೆ. ಆದ್ದರಿಂದ ಅವನು ಚಿತ್ ಸ್ವರೂಪನು – ಎಂದರೆ ಜ್ಞಾನ ಸ್ವರೂಪನು.

ಹೀಗೆ ಜಗತ್ತಿನ ವಸ್ತುಗಳು ಅಸತ್ಯವೂ ಜಡವೂ ಸಾಂತವೂ (ಅಂತ ಉಳ್ಳವೂ) ಆಗಿವೆ. ಆದರೆ ಪರಮಾತ್ಮನು ಸತ್ಯವೂ ಜ್ಞಾನವೂ ಅನಂತವೂ ಆಗಿದ್ದಾನೆ.

ಇಲ್ಲೊಂದು ವಿಚಿತ್ರ ಸಂಗತಿಯನ್ನು ಹೇಳಬೇಕು: ಅಸತ್ಯವಾದ ಮಡಕೆಯ ಹೋಲಿಕೆಯಲ್ಲಿ ಮಣ್ಣು ಸತ್ಯ. ಆದರೆ ಮಡಕೆಯೂ ಮಣ್ಣೇ. ಆದ್ದರಿಂದ ನಾವು 'ಮಡಕೆ, ಮಡಕೆ' ಎಂದು ಹೇಳುತ್ತಿದ್ದರೂ ಅದು ಮಣ್ಣೇ. ಇದನ್ನು ಗಮನದಲ್ಲಿಟ್ಟುಕೊಂಡಾಗ ಮಣ್ಣನ್ನು 'ಸತ್ಯ' ಎಂದು ವರ್ಣಿಸುವುದಕ್ಕೂ ಅವಕಾಶವಿಲ್ಲ. ಹಾಗೆಯೇ, ಜಗತ್ತಿಗೆ ಹೋಲಿಸಿ ಪರಮಾತ್ಮನಿಗೆ ಮೂರು ಲಕ್ಷಣಗಳನ್ನು ಹೇಳಿತಲ್ಲವೆ? ಆದರೆ ಜಗತ್ತೆಲ್ಲವೂ ಅವನೇ ಆಗಿರುವಾಗ ಸ್ವರೂಪ ದೃಷ್ಟಿಯಲ್ಲಿ ಅವನೊಬ್ಬನೇ ಇದ್ದಾನೆ. ಆದ್ದರಿಂದ ಸ್ವರೂಪ ದೃಷ್ಟಿಯಿಂದ ಅವನನ್ನು ಯಾವ ರೀತಿ ವರ್ಣಿಸುವುದಕ್ಕೂ ಅವಕಾಶವಿಲ್ಲ. ಆದ್ದರಿಂದಲೇ ಆರಂಭದಲ್ಲಿ ಶ್ರುತಿಯು ಅವನನ್ನು ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಕರ್ತ ಇತ್ಯಾದಿಯಾಗಿ ಸವಿಶೇಷವಾಗಿ ವರ್ಣಿಸಿ, ಕೊನೆಯಲ್ಲಿ 'ನೇತಿ ನೇತಿ – ಹೀಗಲ್ಲ ಹೀಗಲ್ಲ' ಎಂದು ಅವನಿಗೆ ನಿರ್ವಿಶೇಷತ್ವವನ್ನು ಹೇಳುತ್ತದೆ. ಜಗತ್ತನ್ನು ಅವನಿಂದ ಬೇರೆ ಮಾಡಿದಾಗ ಅವನು ಸವಿಶೇಷನಂತೆ ತೋರಿದರೂ ಜಗತ್ತು ಅವನಿಂದ ಬೇರೆಯಾಗಿರದ ಸ್ವರೂಪ ದೃಷ್ಟಿಯಲ್ಲಿ, ಅವನು ನಿರ್ವಿಶೇಷನು.

### ಜೀವ

ಚೇತನನಾದ ಪರಮಾತ್ಮನು ಜಗತ್ಸೃಷ್ಟಿಯ ಕೊನೆಯಲ್ಲಿ ಮನುಷ್ಯಾದಿ ಪ್ರಾಣಿಶರೀರಗಳನ್ನು ಸೃಷ್ಟಿಸಿ ಅವುಗಳಲ್ಲಿ ಒಳಹೊಕ್ಕು ಜೀವರೂಪದಲ್ಲಿ ತೋರಿಕೊಳ್ಳುತ್ತಾನೆ. ಜಡಜಗತ್ತು ಪರಮಾತ್ಮನ ಒಂದು ವೇಷವಾದರೆ, ಜೀವನು ಇನ್ನೊಂದು ವೇಷ. ಸೃಷ್ಟಿಗೆ ಮುಂಚೆ ಪರಮಾತ್ಮನು ಒಬ್ಬನೇ ಇದ್ದದ್ದರಿಂದ, ಈಗ ಕಾಣಬರುವ ಜಗತ್ತಾಗಲೀ ಜೀವನಾಗಲೀ ಅವನಿಗಿಂತ ಬೇರೆಯಿರುವುದು ಸಾಧ್ಯವಿಲ್ಲ. ಮಡಕೆ, ಹೂಜಿ, ಹೆಂಚು ಮುಂತಾದ ಆಕಾರಗಳಲ್ಲಿ ಕಂಡುಬರುವುದೆಲ್ಲವೂ ಮಣ್ಣೇ ತಾನೆ! ಹಾಗೆಯೇ ಇಲ್ಲೂ ತಿಳಿದುಕೊಳ್ಳಬೇಕು. ಸರ್ವವ್ಯಾಪಿಯಾದ ಪರಮಾತ್ಮನೇ ಪ್ರಾಣಧಾರಣೆ, ವಿಷಯಗಳನ್ನು ಅರಿತುಕೊಳ್ಳುವುದು, ಓಡಾಡುವುದು ಮುಂತಾದ ವ್ಯವಹಾರಗಳ ಮೂಲಕ ಪ್ರಕಟವಾಗಿ ಜೀವನಂತೆ ತೋರಿಕೊಳ್ಳುತ್ತಾನೆ. ಇದನ್ನು ಹೀಗೆಯೇ ಅರಿತುಕೊಂಡವನು 'ಜ್ಞಾನಿ' ಎನ್ನಿಸಿಕೊಳ್ಳುತ್ತಾನೆ. ಈ ರೀತಿಯ ತನ್ನ ಸರ್ವವ್ಯಾಪಿತ್ವವನ್ನು ಅರಿತುಕೊಳ್ಳದೆ ತನ್ನಿಂದ ಜಗತ್ತನ್ನೂ, ಇತರ ಜೀವರುಗಳನ್ನೂ ಬೇರ್ಪಡಿಸಿ 'ನಾನು–ನೀನು–ಅದು' ಎಂದು ಬೇರೆ ಬೇರೆಯಾಗಿ ಅರಿತುಕೊಂಡವನು 'ಅಜ್ಞಾನಿ.' ಜ್ಞಾನಿಯು ಮುಕ್ತನು, ಅಜ್ಞಾನಿಯು ಅಮುಕ್ತನು.

### ಸಾಧನೆ

ಈ ಜ್ಞಾನವನ್ನು ಪಡೆದುಕೊಳ್ಳುವುದು ಹೇಗೆ? ಶ್ರುತ್ಯರ್ಥವನ್ನು ಶ್ರವಣ ಮಾಡಬೇಕು. ಸಾಧಾರಣವಾಗಿ ದೇಹಬುದ್ಧಿಯಿಂದ ಉಂಟಾಗಿರುವ ಸಂಸ್ಕಾರಗಳು ಶ್ರುತ್ಯರ್ಥವನ್ನು ಅರಿತುಕೊಳ್ಳಲು ಅಡ್ಡಿಯಾಗುತ್ತವೆ. ಸಂಶಯಗಳು ಉಂಟಾಗುತ್ತವೆ. ತರ್ಕ ಮಾಡಿ ಅವುಗಳನ್ನು ನಿವಾರಿಸಿಕೊಳ್ಳಬೇಕು. ಹೀಗೆ ತರ್ಕವನ್ನು ಉಪಯೋಗಿಸುವಾಗ ತನ್ನ ಬುದ್ಧಿಯಲ್ಲಿರುವ ನಂಬಿಕೆಗಿಂತ ಹೆಚ್ಚಿನ ನಂಬಿಕೆ ಶ್ರುತಿಯಲ್ಲಿರಬೇಕು. ಎಂದರೆ ಒಣ ತರ್ಕವನ್ನು ಬಿಟ್ಟು ಶ್ರುತ್ಯರ್ಥವನ್ನು ಒಪ್ಪಿ, ಕೇವಲ ತನ್ನ ಸಂಶಯ ಪರಿಹಾರಕ್ಕಾಗಿ ಪ್ರಶ್ನೆಯನ್ನು ಮಾಡಬೇಕು. ಹಾವೆಂದು ಕೊಂಡಿದ್ದನ್ನು ಪರೀಕ್ಷೆಯ ನಂತರ ಹಗ್ಗವೆಂದು ಅರಿತವನು ಮುಂಚೆ ಆಗಿದ್ದ ತಪ್ಪನ್ನು ಕಣ್ಣುಗಳ ಮೇಲೆ ಹೊರಿಸದೆ "ನಾನು ಸರಿಯಾಗಿ ನೋಡಲಿಲ್ಲ" ಎಂದು ತಪ್ಪು ತನ್ನದೆಂದೇ ಒಪ್ಪಿಕೊಳ್ಳುವನಲ್ಲವೆ? ಹಾಗೆಯೇ ಇಲ್ಲೂ ಶ್ರುತಿಯಲ್ಲಿ ತಪ್ಪನ್ನು ಹುಡುಕದೆ ತನ್ನಲ್ಲಿಯೇ ಹುಡುಕಿ ತಿದ್ದಿಕೊಳ್ಳಬೇಕು. ಇಂತಹ ತರ್ಕವನ್ನು **'ಶ್ರುತ್ಯನುಗೃಹೀತ ತರ್ಕ'** ಎನ್ನುತ್ತಾರೆ. ಇದರಿಂದ ಸಂಶಯಗಳು ಸಂಪೂರ್ಣವಾಗಿ ಪರಿಹಾರವಾಗುತ್ತವೆ. ಶ್ರುತ್ಯರ್ಥವು ಬುದ್ಧಿಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಈ ರೀತಿ ನಿಶ್ಚಿತವಾದ ಅರ್ಥವನ್ನು ಬುದ್ಧಿಯಲ್ಲಿ ಊರೆ ಹಾಕಿಡಬೇಕು. ಎಂದರೆ ಸಂತತವಾಗಿ ಗಮನವು ಆತ್ಮನ ಕಡೆಯೇ ಹರಿಯುತ್ತಿರಬೇಕು. ಇದನ್ನು ನಿದಿಧ್ಯಾಸನವೆನ್ನುತ್ತಾರೆ.

ಪ್ರಶ್ನೆ: ಇದು ಬಹಳ ಕಷ್ಟವಾದ ಕೆಲಸ.

ಉತ್ತರ: ಹೌದು. ವೈರಾಗ್ಯವಿಲ್ಲದಿರುವುದೇ ನಿದಿಧ್ಯಾಸನಕ್ಕೆ ಅಡ್ಡಿ. ವೈರಾಗ್ಯವನ್ನು ಪಡೆದುಕೊಳ್ಳಲು ಮೊದಲು ಶಾಸ್ತ್ರೀಯ ನಿಷ್ಕಾಮ ಕರ್ಮದಲ್ಲಿ ನಿರತನಾಗಬೇಕಾಗುತ್ತದೆ. ಎಂದರೆ ವರ್ಣಾಶ್ರಮಗಳಿಗೆ ಅನುಸಾರವಾಗಿ ಶಾಸ್ತ್ರವು ತಿಳಿಸಿಕೊಡುವ ಜಪ ಉಪವಾಸ ದೇವತಾರಾಧನೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕು. ಇದರಿಂದ ಕಾಲಕ್ರಮದಲ್ಲಿ ವೈರಾಗ್ಯವು ಮೈಗೂಡುತ್ತದೆ.

ಪ್ರಶ್ನೆ: ವ್ಯಾಮೋಹಗಳಲ್ಲಿ ಮುಳುಗಿರುವ ನಮಗೆ ಇದೂ ಕಷ್ಟವಾಗಿದೆಯಲ್ಲ?

ಉತ್ತರ: ಹಾಗಿದ್ದರೆ ಸಕಾಮ ಕರ್ಮವನ್ನು ಮಾಡುತ್ತಿರುವಾಗಲೂ 'ಭಗವಂತನೇ, ನನ್ನ ವ್ಯಾಮೋಹಗಳನ್ನು ಹೋಗಲಾಡಿಸು' ಎಂದು ಬೇಡಿಕೊಳ್ಳುತ್ತಿರಬೇಕು. ಎಂದರೆ ಮೋಕ್ಷಕ್ಕೆ ಭಗವಂತನಲ್ಲಿ ಅಚಲವಾದ ಭಕ್ತಿಯೇ ಪ್ರಪ್ರಥಮ ಸಾಧನವೆಂದಾಯಿತು. ಇದನ್ನು ಹೊಂದಿರುವವನು ಕಡುಪಾಪಿಯಾದರೂ ಮುಂದಕ್ಕೆ ಹೋಗಬಲ್ಲನೆಂದು ಶ್ರೀಕೃಷ್ಣ ಪರಮಾತ್ಮನೇ ಆಶ್ವಾಸನೆಯನ್ನು ನೀಡಿದ್ದಾನೆ. ಇಲ್ಲಿಂದಲೇ ಕ್ರಮೇಣ ವೈರಾಗ್ಯ ಪ್ರಾಪ್ತಿ, ನಂತರ ಶಾಸ್ತ್ರ ಶ್ರವಣ ಮನನ ನಿದಿಧ್ಯಾಸನಗಳ ಮೂಲಕ ಆತ್ಮಜ್ಞಾನ ಪ್ರಾಪ್ತಿ. ಭಗವಂತನು ಬಹಳ ದೊಡ್ಡವನು. ಅವನಿಗೆ ನಮ್ಮ ಮೇಲೆ ಅಪಾರವಾದ ಕರುಣೆಯಿದೆ. ಅವನು ನಮ್ಮ ಹೃದಯದಲ್ಲೇ ಇದ್ದಾನೆ. ನಾವು ಅವನ ಕಡೆ ತಿರುಗಿ ನೋಡುವುದನ್ನೇ ಅವನು ಕಾಯುತ್ತಿರುತ್ತಾನೆ. ಅವನ ಕಡೆ ತಿರುಗಿ ನೋಡುವುದು ಮಾತ್ರವೇ ನಮ್ಮ ಶ್ರಮ. ನಂತರ ಕ್ರಮಕ್ರಮವಾಗಿ ಅವನನ್ನು ಸಮೀಪಿಸುತ್ತ, ಕೊನೆಗೆ ಅವನಲ್ಲೇ ಒಂದಾಗಿ ನಿಲ್ಲುವುದೆಂಬ ಮೋಕ್ಷವು ಆತನ ಅನುಗ್ರಹದಿಂದಲೇ ಆಗಿಬಿಡುತ್ತದೆ.

■